**DAY & DATE: TUESDAY, MAY 24th, 2016,** **Bengaluru, Page No. 08**

**Matter: VTU Convocation - 2016**

**As appeared in the Newspaper:**

**THE NEW INDIAN EXPRESS**

# VTU convocation: Mysuru girl bags nine gold medals

**EXPRESS NEWS SERVICE**
@ Belagavi

VISVESVARAYA Technological University (VTU) will be conferring degrees on 68,960 students during its 15th Annual Convocation to be held at 11 am on May 27.

Dr V Sridhar, acting Vice-Chancellor of VTU told reporters here on Monday that Vajubhai Vala, Governor and Chancellor of VTU will preside over the function. T B Jayachandra, Minister for Higher Education, Law, Justice, Human Rights and Parliamentary Affairs and Pro-Chancellor of VTU will also be present.

He said that A S Kiran Kumar, Chairman of Indian Space Research Organisation will be the chief guest and deliver the convocation address.

VTU will confer BE degrees to 53,972 students, BArch to 176 students, MBA to 4,258 students, MCA to 2,730 students, M Tech to 7,669 students and M Arch degree to 23 students. PhDs will be awarded to 112 students and MSc (Engg) to 20 students.

The university will be providing transportation facility from Kittur Rani Channamma Circle to VTU campus on May 27 from 8 am, at every 15-minute interval till 10.30 am.

Dr H G Shekharappa, Registrar (Evaluation), VTU and Registrar Dr H N Jagannatha Reddy were also present.

## Golden Girls of VTU

Mysuru girl Gayatri Manjeshwar Prabhu will be presented with nine gold medals, ranking top among the achievers to be felicitated during the annual convocation of VTU.

Gayatri, of GSSS Institute of Engineering and Technology for Women, Mysuru, will be felicitated with the Sri Sangappa L Desai of Sonna Gold Medal, Sri Basavaraj Muddebihal Gold Medal, Murthy's Medal of Excellence, H H Jagadguru Late Dr Shivarathri Rajendra Mahaswamigalu of Suttur Mutt Gold Medal, Squadron Leader S S Chaitanya Memorial Gold Medal, R N Shetty Gold Medal, Jain University Gold Medal, Dr S Rame Gowda Memorial Gold Medal and VTU Gold Medal for securing 1st rank, highest marks in BE Electrical and Electronics Engineering, highest marks among the rank holders in any branch of BE and highest marks among the students of engineering colleges affiliated to VTU.

Niveditha M from Global Academy of Technology, Bengaluru is in the second position and will get seven gold medals.

She will be felicitated with Murthy's Medal of Excellence, Dr M C Srinivas Murthy Memorial Cash prize, Sir M Visvesvaraya Cooperative Bank Gold Medal, R N Shetty Gold Medal, N Krishna Murthy Memorial Gold Medal, Jyothi Gold Medal and VTU gold medal for having secured 1st rank in BE Civil Engineering.

Deepthi Devaraj of BNM Institute of Technology, Bengaluru will receive six gold medals.

She will be felicitated with Sri P V Kumarswamy Memorial Gold Medal, PESIT Gold Medal, R N Shetty Gold Medal, Jain University Gold Medal, Jyothi Gold Medal and VTU Gold Medal for topping in BE Computer Science.

**DAY & DATE: TUESDAY, MAY 24th, 2016,** State/Nation, Page No. 7

**Matter: VTU Convocation - 2016**

**As appeared in the Newspaper:**

**PRAJAVANI**

# ವಿ.ಟಿ.ಯು ಘಟಿಕೋತ್ಸವ 27ರಂದು

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿ.ಟಿ.ಯು) 15ನೇ ಘಟಿಕೋತ್ಸವವು ಮೇ 27ರಂದು ನಡೆಯಲಿದೆ.

ಘಟಿಕೋತ್ಸವ ಭಾಷಣವನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷ ಎ.ಎಸ್. ಕಿರಣಕುಮಾರ್ ಮಾಡುವರು ಎಂದು ಪ್ರಭಾರ ಕುಲಪತಿ ಡಾ.ವಿ.ಶ್ರೀಧರ್ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ರಾಜ್ಯಪಾಲ ವಜುಭಾಯಿ ವಾಲಾ ಪದವಿ ಪ್ರದಾನ ಮಾಡುವರು. ಉನ್ನತ ಶಿಕ್ಷಣ ಸಚಿವ ಟಿ.ಬಿ. ಜಯಚಂದ್ರ ಪಾಲ್ಗೊಳ್ಳುವರು ಎಂದರು.

ಎಂ.ಟೆಕ್‌ನಲ್ಲಿ ವಿ.ಟಿ.ಯು ಸ್ನಾತಕೋತ್ತರ ಕೇಂದ್ರ 17, ಬೆಂಗಳೂರಿನ ಆರ್‌ವಿಸಿಇ ಕಾಲೇಜು 17, ಬೆಂಗಳೂರಿನ ಪಿಇಎಸ್‌ಐಟಿ ಕಾಲೇಜು 16 ರ‍್ಯಾಂಕ್ ಪಡೆದಿವೆ. ಆರ್ಕಿಟೆಕ್ಟ್ ಸ್ನಾತಕೋತ್ತರ ಪದವಿಯಲ್ಲಿ ಬೆಂಗಳೂರಿನ ಆರ್‌ವಿಸಿಇ ಹಾಗೂ ಬಿಎಂಎಸ್‌ಸಿಇ ಕಾಲೇಜುಗಳು ತಲಾ ಮೂರು ರ‍್ಯಾಂಕ್ ಪಡೆದಿವೆ.

'ಬಿ.ಇ, ಬಿ.ಆರ್ಕ್, ಎಂ.ಟೆಕ್, ಎಂಬಿಎ ಹಾಗೂ ಎಂಸಿಎ ಪದವಿ ಕೋರ್ಸ್‌ಗಳಲ್ಲಿ ಬೆಂಗಳೂರಿನ ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜು ಒಟ್ಟು 60 ರ‍್ಯಾಂಕ್‌ಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದೆ. ಬೆಂಗಳೂರಿನ ಬಿಐಟಿ 25 ರ‍್ಯಾಂಕ್‌ಗಳೊಂದಿಗೆ ದ್ವಿತೀಯ ಸ್ಥಾನ, 23 ರ‍್ಯಾಂಕ್ ಪಡೆದಿರುವ ಬೆಂಗಳೂರಿನ ಆಚಾರ್ಯ ಇನ್‌ಸ್ಟಿಟ್ಯೂಟ್ ತೃತೀಯ ಸ್ಥಾನ, ಬೆಂಗಳೂರಿನ ಆರ್‌ವಿಸಿಇ ಕಾಲೇಜು 20 ರ‍್ಯಾಂಕ್‌ಗಳೊಂದಿಗೆ ನಾಲ್ಕನೇ ಸ್ಥಾನ ಪಡೆದಿವೆ ಎಂದು ಅವರು ತಿಳಿಸಿದರು.

**ಗೌರವ ಡಾಕ್ಟರೇಟ್ ಇಲ್ಲ:** ಈ ವರ್ಷ ಗೌರವ ಡಾಕ್ಟರೇಟ್ ನೀಡದಿರಲು ಕಾರ್ಯಕಾರಿ ಮಂಡಳಿ ತೀರ್ಮಾನಿಸಿದೆ. ಹೀಗಾಗಿ ಯಾರಿಗೂ ಗೌರವ ಡಾಕ್ಟರೇಟ್ ಪದವಿ ನೀಡುತ್ತಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಎಂ.ಗಾಯತ್ರಿಗೆ ಅತ್ಯಧಿಕ ಚಿನ್ನದ ಪದಕ

ಮೈಸೂರಿನ ಜೆಎಸ್‌ಎಸ್ ಮಹಿಳಾ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ವಿದ್ಯಾರ್ಥಿನಿ ಎಂ. ಗಾಯತ್ರಿ ಪ್ರಭು ಪದವಿ ವಿಭಾಗದಲ್ಲಿ ಶೇ 90.72 ಅಂಕ ಪಡೆದು 9 ಚಿನ್ನದ ಪದಕ ಗಳಿಸಿದ್ದಾರೆ.

ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಎಂ. ನಿವೇದಿತಾ ಪದವಿಯಲ್ಲಿ ಶೇ 89.01 ಅಂಕ ಪಡೆದು 7 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಬೆಂಗಳೂರಿನ ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ದೀಪ್ತಿ ದೇವರಾಜ್ ಶೇ 85.94 ಅಂಕ ಪಡೆದು 6 ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ಬೆಂಗಳೂರಿನ ರೇವಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ರಜನೀಶ ಭುಸಾಳ ಶೇ 87.57 ಅಂಕ ಪಡೆದು 5 ಚಿನ್ನದ ಪದಕ ಗಳಿಸಿದ್ದಾರೆ. ಬೆಂಗಳೂರಿನ ಆರ್.ಎನ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್ ವಿಭಾಗದ ಡಿ.ಆರ್. ಉಲ್ಲಾಸ ಭಾರದ್ವಾಜ ಶೇ 87.35 ಅಂಕ ಪಡೆದು 5 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂದು ಪ್ರಭಾರ ಕುಲಪತಿ ಡಾ.ವಿ.ಶ್ರೀಧರ್ ಹೇಳಿದರು.

**DAY & DATE: TUESDAY, MAY 24th, 2016,** State/Sports, Page No. 9

**Matter: VTU Convocation - 2016**

**As appeared in the Newspaper:**

**SAMYUKTA KARNATAKA**

# ವಿದ್ಯಾರ್ಥಿನಿಯರಿಗೆ ಹೆಚ್ಚು ಚಿನ್ನದ ಪದಕ

## 27ರಂದು ವಿಟಿಯು 15ನೇ ಘಟಿಕೋತ್ಸವ

ಬೆಳಗಾವಿ

ನಗರದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 15ನೇ ಘಟಿಕೋತ್ಸವ ಮೇ 27ರಂದು ಬೆಳಿಗ್ಗೆ 11 ಗಂಟೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜ್ಞಾನ ಸಂಗಮ ಆವರಣದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರಭಾರಿ ಕುಲಪತಿ ಡಾ. ವಿ. ಶ್ರೀಧರ್ ಹೇಳಿದರು.

ವಿಟಿಯು ಸಭಾಂಗಣದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷ ವಿದ್ಯಾರ್ಥಿನಿಯರೇ ಹೆಚ್ಚು ರ‍್ಯಾಂಕ್ ಪಡೆದು ಮೇಲುಗೈ ಸಾಧಿಸಿದ್ದಾರೆ ಎಂದು ತಿಳಿಸಿದರು. ಈ ಬಾರಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಯಾವುದೇ ಗೌರವ ಡಾಕ್ಟರೇಟ್ ನೀಡುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಈ ಘಟಿಕೋತ್ಸವದಲ್ಲಿ 53972 ಬಿಇ ಪದವಿ, 176 ಬಿ.ಆರ್ಕ್, 4258 ಎಂಬಿಎ, 2730 ಎಂಸಿಎ, 7669 ಎಂಟೆಕ್, 23 ಎಂ.ಆರ್ಕ್, 112 ಪಿಎಚ್‌ಡಿ ಹಾಗೂ 20 ಎಂಎಸ್ಸಿ (ಇಂಜಿನಿಯರಿಂಗ್) ಪದವಿಗಳನ್ನು ಪ್ರದಾನ ಮಾಡಲಾಗುತ್ತಿದೆ ಎಂದು ತಿಳಿಸಿದರು. ಪ್ರಸ್ತುತ ಘಟಿಕೋತ್ಸವದಲ್ಲಿ ಕಾಲೇಜು ಮಟ್ಟದಲ್ಲಿ ಬಿಇ ಹಾಗೂ ಬಿಟೆಕ್ ರ‍್ಯಾಂಕ್‌ನಲ್ಲಿ ಬೆಂಗಳೂರಿನ ಡಿಎಸ್ಸಿಇ ಕಾಲೇಜು 35 ಪದಕ ಪಡೆದು ಪ್ರಥಮ ಸ್ಥಾನ, ಬಿಐಟಿ ಕಾಲೇಜು 19 ಪದಕ ಪಡೆದು ದ್ವಿತೀಯ, ಆಚಾರ್ಯ ಇನ್‌ಸ್ಟಿಟ್ಯೂಟ್ 19 ಪದಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿವೆ. ಅಲ್ಲದೇ ಪ್ರಪ್ರಥಮ ಬಾರಿಗೆ ಎಂಟೆಕ್ ವಿಭಾಗದಲ್ಲಿ 17 ಪದಕ ಪಡೆಯುವ ಮೂಲಕ ವಿಟಿಯು ಪಿಜಿ ವಿಭಾಗ ವಿಶೇಷ ಸಾಧನೆ ಮಾಡಿದೆ ಎಂದು ಹೇಳಿದರು.

ಯುಜಿ ಹಾಗೂ ಪಿಜಿ ವಿಭಾಗಗಳಲ್ಲಿ 50 ಪದಕಗಳನ್ನು ಪಡೆಯುವ ಮೂಲಕ ಬೆಂಗಳೂರಿನ ಡಿಎಸ್‌ಸಿಇ ಕಾಲೇಜು ಪ್ರಥಮ ಸ್ಥಾನದಲ್ಲಿದೆ. ಅದೇ ರೀತಿ ಕ್ರಮವಾಗಿ ಬಿಐಟಿ ಕಾಲೇಜು 25 ಪದಕ, ಆಚಾರ್ಯ ಇನ್‌ಸ್ಟಿಟ್ಯೂಟ್ 23 ಪದಕ, ಆರ್‌ವಿಸಿಇ ಕಾಲೇಜು 20 ಪದಕ, ಪಿಇಎಸ್‌ಐಟಿ ಕಾಲೇಜು 19 ಪದಕ ಹಾಗೂ ವಿಟಿಯು ಪಿಜಿ ವಿಭಾಗ 17 ಪದಕಗಳನ್ನು ಪಡೆಯುವ ಮೂಲಕ 6ನೇ ಸ್ಥಾನ ಪಡೆದು ಸಾಧನೆ ಮಾಡಿದೆ ಎಂದು ತಿಳಿಸಿದರು.



**ಗಾಯತ್ರಿ ಪ್ರಭು**

ಜೆಎಸ್‌ಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಫಾರ್ ವುಮೆನ್ ಕಾಲೇಜಿನ ವಿದ್ಯಾರ್ಥಿನಿ ಗಾಯತ್ರಿ ಮಂಜೇಶ್ವರ ಪ್ರಭು ಅವರು ಬಿಇ ಇಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪ್ರಥಮ ರ‍್ಯಾಂಕ್ ಪಡೆಯುವ ಮೂಲಕ 9 ಚಿನ್ನದ ಪದಕ ಪಡೆದುಕೊಂಡಿದ್ದಾಳೆ.



**ನಿವೇದಿತಾ ಎಂ.**

ಬೆಂಗಳೂರಿನ ಪ್ರತಿಷ್ಠಿತ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿನಿ ನಿವೇದಿತಾ ಎಂ. ಅವರು ಬಿಇ ಇಂಜಿನಿಯರಿಂಗ್ ವಿಷಯದಲ್ಲಿ ಪ್ರಥ‘ಮ ರ‍್ಯಾಂಕ್ ಪಡೆಯುವ ಮೂಲಕ 7 ಚಿನ್ನದ ಪದಕಗಳನ್ನು ಪಡೆದು ಎರಡನೇ ಸ್ಥಾನ ಪಡೆದುಕೊಂಡಿದ್ದಾಳೆ.



**ದೀಪ್ತಿ ದೇವರಾಜ**

ಬೆಂಗಳೂರಿನ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿನಿ ದೀಪ್ತಿ ದೇವರಾಜ ಅವರು ಬಿಇ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಷಯದಲ್ಲಿ 6 ಪದಕಗಳನ್ನು ಪಡೆಯುವ ಮೂಲಕ ಮೂರನೇ ಸ್ಥಾನ ಪಡೆದುಕೊಂಡಿದ್ದಾಳೆ.

### 147 ಪದಕ ಪ್ರದಾನ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 1ರಿಂದ 10 ರವರೆಗೂ ರ‍್ಯಾಂಕ್ ಪಡೆದ ಒಟ್ಟು 426 ವಿದ್ಯಾರ್ಥಿಗಳಿಗೆ ಪದಕಗಳನ್ನು ಪ್ರದಾನ ಮಾಡಲಾಗುವುದು. ಅಲ್ಲದೇ, ವಿಟಿಯು 92 ಚಿನ್ನದ ಪದಕ ಹಾಗೂ 55 ದತ್ತಿ ಚಿನ್ನದ ಪದಕಗಳು ಸೇರಿ ಒಟ್ಟು 147 ಪದಕಗಳನ್ನು ಪ್ರದಾನ ಮಾಡಲಾಗುವುದು ಎಂದು ಡಾ. ವಿ. ಶ್ರೀಧರ್ ತಿಳಿಸಿದರು.

### ಒಂದಕ್ಕಿಂತ ಹೆಚ್ಚು ಚಿನ್ನದ ಪದಕ ಪಡೆದವರು

ಬೆಂಗಳೂರಿನ ರೇವ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಬಿಇ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿ ರಜನೀಶ್ ಭೂಶಲಾ ಮತ್ತು ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಬಿಇ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯೂನಿಕೇಷನ್ ವಿದ್ಯಾರ್ಥಿ ಉಲ್ಲಾಸ ಭಾರದ್ವಾಜ್ ಡಿ.ಆರ್. 5 ಚಿನ್ನದ ಪದಕ, ಬೃಂದಾವನ ಕಾಲೇಜ್ ಆಓ ಇಂಜಿನಿಯರಿಂಗ್‌ನ ಸಿವಿಲ್ ವಿಭಾಗದ ವಿದ್ಯಾರ್ಥಿ ತ್ರಿಬಿಕ್ರಮ್ ರಾಜುರೆ ಹಾಗೂ ಬೆಂಗಳೂರಿನ ಜೆಎಸ್‌ಎಸ್ ಅಕ್ಯಾಡೆಮಿ ಆಫ್ ಟೆಕ್ನಾಲಜಿ ಶಿಕ್ಷಣ ಕಾಲೇಜಿನ ಬಿಇ ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ ವಿದ್ಯಾರ್ಥಿನಿ ಆರತಿ ಜಾ, ಗುಬ್ಬಿಯ ಚೆನ್ನಬಸವೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿನಿ ಚೈತ್ರಾ ಟಿ. ಆರ್. ಅವರು ಕ್ರಮವಾಗಿ 4 ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಬೆಂಗಳೂರಿನ ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿನಿ ಸ್ವಾತಿ ಎಂ.ಎನ್ ಹಾಗೂ ಚಿಕ್ಕಮಂಗಳೂರಿನ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿನಿ ರಂಜಿತಾ ಎಚ್. ಕ್ರಮವಾಗಿ 3 ಚಿನ್ನದ ಪದಕ ಪಡೆದುಕೊಂಡಿದ್ದಾರೆ.